**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.438/2023**

**PW-4 CW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಗಿರಿಮಲ್ಲಿಕಾರ್ಜುನ ತಂದೆ ಮೈಲಾರಿ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಪೊಲೀಸ ಪೇದೆ |
| ವಾಸಸ್ಥಳ | ಃ | ದೇವದುರ್ಗ ವೃತ್ತ ಕಚೇರಿ |
| ಪ್ರಮಾಣಿಕರಿಸಿದ ದಿನಾಂಕ | ಃ | 24-01-2025 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು 2019 ರಿಂದ ಅಕ್ಟೋಬರ್ 2021 ರ ವರೆಗೆ ಗಬ್ಬೂರು ಪೊಲೀಸ ಠಾಣೆಯಲ್ಲಿ ಪಿಸಿ-154 ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08-05-2021 ರಂದು ನಾನು ಠಾಣೆಯಲ್ಲಿದ್ದಾಗ ನಮ್ಮ ಠಾಣೆಯ ಪಿಎಸ್ಐ ರವರು ನನ್ನನ್ನು ಮತ್ತು ಚಾಸಾ-5 ಶಬ್ಬಿರ ಇವರನ್ನು ಕೋವಿಡ್ ಹಿನ್ನೆಲೆಯಲ್ಲಿ ಪೆಟ್ರೋಲಿಂಗ್ ಕರ್ತವ್ಯಕ್ಕೆ ಕರೆದುಕೊಂಡು ಹೋಗಿದ್ದು, ಪೆಟ್ರೋಲಿಂಗ್ ಕರ್ತವ್ಯ ಮಾಡುತ್ತಿದ್ದಾಗ ಹುನಗುಂಡಬಾಡ ಗ್ರಾಮಕ್ಕೆ ಹೋದಾಗ ಮಾರೆಮ್ಮ ದೇವಿಯ ಗುಡಿಯ ಹತ್ತಿರ ಹೋದಾಗ ಬಾಪುಗೌಡ ತಂದೆ ಗಂಗಾಧರ ಇತನು ತನ್ನ ಕಿರಾಣಿ ಅಂಗಡಿಯನ್ನು ತೆರೆದಿದ್ದು ಅಂಗಡಿಯ ಮುಂದೆ ಜನರು ಸೇರಿದ್ದರು. ಸದರಿಯವರು ಯಾರು ಮಾಸ್ಕ ಹಾಕಿಕೊಂಡಿರುವುದಿಲ್ಲ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡಿರದೇ ಕೋವಿಡ್ ನಿಯಮಾವಳಿಗಳನ್ನು ಪಾಲಿಸುತ್ತಿರಲಿಲ್ಲ ಹಾಗೂ ಕರೋನಾ ಹರಡುವಿಕೆಯಲ್ಲಿ ನಿರ್ಲಕ್ಷ್ಯ ವಹಿಸಿರುವುದು ಕಂಡುಬಂದಿರುತ್ತದೆ. ಈ ಕುರಿತು ನಮ್ಮ ಪಿಎಸ್ಐ ರವರು ದೂರನ್ನು ದಾಖಲಿಸಿದ್ದು ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಎಸ್ ವಕೀಲರು ವಿ.ಡಿ.ಸಿ ವಕೀಲರ ಪರವಾಗಿ ಕಾಲಾವಕಾಶ ಕೇಳಿದ್ದು, ಸಕಾರಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.